ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್‌ಕೇಸ್ ನಂಬರ್ : 84/2024**

**ಫ್ರಾಸಾ- 5 ಚಾಸಾ- 7**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಪರಮೇಶ |
| ತಂದೆಯ ಹೆಸರುಃ | : | ಸ್ವಾಮಿಗೌಡ |
| ವಯಸ್ಸುಃ | : | 30 ವರ್ಷ |
| ಉದ್ಯೋಗಃ | : | ಆಟೋಚಾಲಕ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:01-12-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ಸದರಿ ದಾಖಲೆಯನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಈ ಸಹಿಯನ್ನು ಎನ್ ಆರ್ ಸರ್ಕಲ್ ಬಳಿ ಇರುವ ಠಾಣೆಯಲ್ಲಿ ಹಾಕಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಈ ಸಹಿ ಹಾಕುವಾಗ ನಾನು ಈ ದಿವಸ ನ್ಯಾಯಾಲಯದ ಮುಂದಿರುವ 4, 6, 7 ಮತ್ತು ವಿಸಿ ಮೂಲಕ ನೋಡಿದ 5ನೇ ಆರೋಪಿತರು ಇರಲಿಲ್ಲ. ಪೊಲೀಸರು ನನ್ನನ್ನು ದೇವರಾಯಪಟ್ಟಣ ಬಳಿ ಇರುವ ಚರ್ಚ್ ಬಳಿ ಹೋಗುವ ಮಣ್ಣು ರಸ್ತೆ ಬಳಿ ಕರೆಸಿಲ್ಲ. ಅಲ್ಲಿ ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿಲ್ಲ.

2.ಈಗ ತೋರಿಸಿದ ಮತ್ತೊಂದು ದಾಖಲೆಯಲ್ಲರುವ ರುಜು ನನ್ನದೆ. ಸದರಿ ದಾಖಲೆಯನ್ನು ನಿಪಿ-10 ಎಂದು ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಈ ಸಹಿಯನ್ನು ಎನ್ ಆರ್ ಸರ್ಕಲ್ ಬಳಿ ಇರುವ ಠಾಣೆಯಲ್ಲಿ ಹಾಕಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಈ ಸಹಿ ಹಾಕುವಾಗ ನಾನು ಈ ದಿವಸ ನ್ಯಾಯಾಲಯದ ಮುಂದಿರುವ 4, 6, 7

ಮತ್ತು ವಿಸಿ ಮೂಲಕ ನೋಡಿದ 5ನೇ ಆರೋಪಿತರು ಇರಲಿಲ್ಲ. ಪೊಲೀಸರು ನನ್ನನ್ನು ಕೆಐಎಡಿಬಿ ಗುರುದೇವ್ ಪ್ಲೈವುಡ್ ಫ್ಯಾಕ್ಟರಿ ಬಳಿ ಕರೆಸಿಲ್ಲ. ನಾನು ಸಹಿ ಹಾಕುವಾಗ ಬೇರೆ ಯಾರಿದ್ದರೆಂದು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿನಾಂಕ 10-6-22ರಂದು ಪೊಲೀಸರುದೇವರಾಯಪಟ್ಟಣ ಬಳಿ ಇರುವ ಚರ್ಚ( ಕಡೆ ಹೋಗುವ ಮಣ್ಣುರಸ್ತೆಗೆ ಕರೆಸಿಕೊಂಡರು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರ ಜೊತೆ 4 ರಿಂದ 7ನೇ ಆರೋಪಿತರು ಇದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರು ಇದೇ ಸ್ಥಳದಲ್ಲಿ ತಾವು ದರೋಡೆ ಮಾಡಿರುವುದಾಗಿ ಹೇಳಿ ನನ್ನ ಸಮಕ್ಷಮದಲ್ಲಿ ತೋರಿಸಿದ ಮೇರೆಗೆ ಪೊಲೀಸರು ಅಲ್ಲಿ ನಿಪಿ-9ರಂತೆ ಸಂಜೆ 5 ರಿಂದ 5-45 ಗಂಟೆ ಸಮಯದಲ್ಲಿ ಮಹಜರು ಮಾಡಿ ನನ್ನ ಸಹಿ ಪಡೆದರೆಂದರೆ ಸರಿಯಲ್ಲ.

2.ನಂತರ ಅದೆ ದಿನಾಂಕದಂದು ಸಂಜೆ ಹಾಸನ ಕೆಐಎಡಿಬಿ ಸರ್ಕಲ್ ಕಡೆಗೆ ಹೋಗುವ ಗುರುದೇವ್ ಪ್ಲೈವುಡ್ ಫ್ಯಾಕ್ಟರಿ ಮುಂಭಾಗಕ್ಕೆ ಆರೋಪಿತರ ಜೊತೆ ಕರೆದುಕೊಂಡು ಹೋದರು, ಅಲ್ಲಿ ಆರೆಌಪಿತರು ಇದೇ ಸ್ಥಳದಲ್ಲಿ ತಾವು ಗೂಡ್ಸ್ ವಾಹನವನ್ನು ಅಡ್ಡಗಟ್ಟಿ ಅಪಹರಣ ಮಾಡಿದ ಸ್ಥ,ಳವೆಂದು ತೋರಿಸಿದರು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ನನ್ನ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿ ನಿಪಿ-10ರಂತೆ ಮಾಡಿದ ಮಹಜರಿಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**